**ಸಾಕ್ಷಿಗೆ ದಿನಾಂಕ : *09-10-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : *13* ರಿಂದ *16* ನೇ ಪ್ರತಿವಾದಿಯರ ಪರ ಶ್ರೀಮತಿ ವಿ ಎನ್ ಹೆಚ್ ವಕೀಲರಿಂದ :**

ನಮ್ಮ ಮನೆತನದ ಮೂಲ ಪುರುಷ ರುದ್ರಪ್ಪ ರವರು ದಿನಾಂಕ 21-02-1994 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಮನೆ ನಂ. 479 ನ್ನು ಹೊರತುಪಡಿಸಿ ಉಳಿದೆಲ್ಲ ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಬೇಕಾಯ್ದೆಶೀರ ವಾರಸಾ ಮತ್ತು ಕಂದಾಯ ದಾಖಲಾತಿಗಳು ಸೃಷ್ಟಿ ಆಗಿರುತ್ತವೆ ಎಂದರೆ ಸರಿಯಲ್ಲ. ಮೂಲ ಪುರುಷ ರುದ್ರಪ್ಪ ರವರು ವಾದಿ ಮತ್ತು ಪ್ರತಿವಾದಿಯರನ್ನು ಏಕತ್ರದಲ್ಲಿ ಬಿಟ್ಟು ಮೈತರಾಗಿರುತ್ತಾರೆ ಎಂದರೆ ಸರಿಯಲ್ಲ. ತುಳಸಿಗೇರಿ ಗ್ರಾಮದ ಜಮೀನು ಸರ್ವೆ ನಂ. 213/ಸಿ ಇದು ಮೂಲತಃ ರುದ್ರಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ರುದ್ರಪ್ಪ ರವರು ತೀರಿಕೊಂಡ ನಂತರ ಅವರ ಮಕ್ಕಳು ಮತ್ತು ರುದ್ರಪ್ಪ ರವರ ತೀರಿ ಹೋದ ಮಗನ ವಾರಸುದಾರರು ವಾರಸಾ ಮಾಡಿಸಿಕೊಂಡಿರುವ ಬಗ್ಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿದಾರರು ನಾವು ಸಣ್ಣವರಿದ್ದು, ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ನಾವು ಈ ದಾವೆಯನ್ನು ದಾಖಲಿಸಿದ ನಂತರ ವಾರಸಾ ಮಾಡಿಕೊಂಡಿರುವ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ರುದ್ರಪ್ಪ ತೀರಿಕೊಂಡ ನಂತರ 4 ನೇ ಪ್ರತಿವಾದಿಯ ಗಂಡ ಈರಪ್ಪ ರವರು ತಾವು ಒಬ್ಬರೇ ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ನೀಲಮ್ಮ ಮತ್ತು ತಂದೆ ಚನ್ನಪ್ಪ ರವರು ದಿನಾಂಕ 20-10-1994 ರಂದು ತಮ್ಮ ಹಕ್ಕು ಬಿಟ್ಟುಕೊಟ್ಟಿದ್ದಾರೆ ಎಂದು ಈ ಕುರಿತು ಡ ನಂ. 4086 ನ್ನು ಬೇಕಾಯ್ದೇಶೀರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಡ ನಂ. 4086 ನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ರುದ್ರಪ್ಪ ರವರು ತೀರಿಕೊಂಡ ನಂತರ ಶಂಕ್ರವ್ವ ರವರನ್ನು ಸೇರಿಸದೇ ನನ್ನ ತಂದೆ ಮತ್ತು ಈರಪ್ಪ ರವರು ತಾವಿಬ್ಬರೇ ಮಕ್ಕಳು ಎಂದು ಬೇಕಾಯ್ದೆಶೀರ ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತುಳಸಿಗೇರಿ ಗ್ರಾಮದ ಜಮೀನು ಸರ್ವೆ ನಂ. 213/ಸಿ ಇದನ್ನು ಮೈತ ಈರಪ್ಪ ರವರಿಗೆ ಮಾರಾಟ ಮಾಡಲು ಯಾವುದೇ ಕಾನೂನು ಬದ್ದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ರುದ್ರಪ್ಪ ರವರು ಇದ್ದಾಗ ಮತ್ತು ಅವರು ತೀರಿಕೊಂಡ ನಂತರ 2021 ರ ವರೆಗೂ ಸರ್ವೆ ನಂ. 317 ಇದರ ಕ್ಷೇತ್ರ 6 ಎಕರೆ 16 ಗುಂಟೆ ಇತ್ತು ಎಂದರೆ ಸರಿಯಲ್ಲ. ಸರ್ವೇನಂ. 317 ಕ್ಕೆ ಸಂಬಂದಪಟ್ಟಂತೆ ನನ್ನ ತಂದೆ ಮತ್ತು ಈರಪ್ಪ ರವರು ಡ ನಂ.1928 ನ್ನು ಖೊಟ್ಟಿಯಾಗಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಚನ್ನಪ್ಪ ಮತ್ತು ಈರಪ್ಪ ರವರು ಸೇರಿಕೊಂಡು ರುದ್ರಪ್ಪ ರವರ ಉಳಿದ ವಾರಸುದಾರರಿಗೆ ಆಸ್ತಿ ಬರಬಾರದು ಎನ್ನುವ ದುರುದ್ದೇಶದಿಂದ ಸರ್ವೆ ನಂ. 317 ರಲ್ಲಿ ಸರ್ವೆ ನಂ. 317/1 ಮತ್ತು 317/2 ಎಂದು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 317 ಇದು ನಮ್ಮ ಮನೆತನದ ಪಿತ್ರಾರ್ಜಿತ ಆಸ್ತಿ ಆಗಿದ್ದರಿಂದ ಅದರಲ್ಲಿ ಶಂಕ್ರವ್ವ ರವರಿಗೆ ¼ ಹಿಸ್ಸಾ ಇರುತ್ತದೆ ಎಂದರೆ ಸರಿಯಲ್ಲ. ದಾವಾದ ಆಸ್ತಿ ಪ್ಲಾಟ ನಂ. 11 ಇದು ನಮ್ಮ ಮನೆತನಕ್ಕೆ ಹೇಗೆ ಬಂದಿತು ಎಂದರೆ ಸಾಕ್ಷಿದಾರರು ಅದನ್ನು ಈರಪ್ಪ ರವರು ಖರೀದಿ ಹಿಡಿದಿರುತ್ತಾರೆ ಎಂದು ಹೇಳುತ್ತಾರೆ. ಈ ಕುರಿತಂತೆ ಖರೀದಿ ಪತ್ರವನ್ನು ಹಾಜರು ಪಡಿಸಿರಬಹುದು. ಪ್ಲಾಟ ನಂ.11 ನ್ನು ನನ್ನ ಅಜ್ಜ

ರುದ್ರಪ್ಪ ರವರು ಖರೀದಿ ಹಿಡಿದಿರುತ್ತಾರೆ ಎಂದರೆ ಸಾಕ್ಷಿದಾರರು ಸದರಿ ಆಸ್ತಿಯನ್ನು ರುದ್ರಪ್ಪ ರವರ ಹೆಸರಿನಲ್ಲಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಅಜ್ಜನ ಹೆಸರಿನಲ್ಲಿ ಚನ್ನಪ್ಪ ಮತ್ತು ಈರಪ್ಪ ರವರು ಮಾಡಿರುತ್ತಾರೆ. 1976 ರಲ್ಲಿ ನನ್ನ ಅಜ್ಜನ ಹೆಸರಿನಲ್ಲಿ ಚನ್ನಪ್ಪ ಮತ್ತು ಈರಪ್ಪ ರವರು ಮಾಡಿರುತ್ತಾರೆ. 4 ನೇ ಪ್ರತಿವಾದಿಗೆ ಪ್ಲಾಟ ನಂ.11 ಪಾಲುವಾಟ್ನಿ ಮಾಡಿಕೊಂಡಾಗ ಬಂದಿರುತ್ತದೆ. 1995 ಆಗಸ್ಟ ತಿಂಗಳಿನಲ್ಲಿ ಪಾಲುವಾಟ್ನಿ ಆಗಿರುತ್ತದೆ. ಈ ಕುರಿತಂತೆ ಪಾಲುವಾಟ್ನಿ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಈ ಕುರಿತಂತೆ ತಹಶೀಲ್ದಾರ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದಾಗ ಲಭ್ಯವಿಲ್ಲ ಎಂದು ಹಿಂಬರಹ ನೀಡಿರುತ್ತಾರೆ. ಈ ಕುರಿತಂತೆ ತಹಶೀಲ್ದಾರ ರವರು ನೀಡಿದ ಹಿಂಬರಹವನ್ನು ಹಾಜರು ಪಡಿಸುತ್ತೇನೆ. ಪ್ಲಾಟ ನಂ. 11 ಮತ್ತು 11 ಎ ಇವು ಮೂಲತಃ ರುದ್ರಪ್ಪ ರವರ ಹೆಸರಿನಲ್ಲಿ ಇದ್ದು, ಅವುಗಳನ್ನು ಬೇಕಾಯ್ದೆಶೀರ ಹಂಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಾದ ಮನೆ ನಂ. 479 ಇದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಮನೆ ಆಸ್ತಿ ನಂ. 14 ಇದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಮನೆ ನಂ. 14 ನ್ನು ರುದ್ರಪ್ಪ ರವರು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಪ್ಲಾಟ ನಂ. 11, 11 ಎ, ಮನೆ ನಂ. 479 ಮತ್ತು ಮನೆ ನಂ.14 ಇವುಗಳನ್ನು 1,2 ಮತ್ತು 5 ರಿಂದ 8 ನೇ ಪ್ರತಿವಾದಿಯರು ಬೇಕಾಯ್ದೆಶೀರ ಹಂಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲ ಆಸ್ತಿಗಳಲ್ಲಿ ಶಂಕ್ರವ್ವ ರವರಿಗೆ ¼ ಹಿಸ್ಸಾ ಇರುತ್ತದೆ ಎಂದರೆ ಸರಿಯಲ್ಲ. ಆಗಸ್ಟ 1995 ರಲ್ಲಿ ಆದ ಪಾಲುವಾಟ್ನಿ ಆಧಾರದ ಮೇಲೆ ಡ ಗಳು ರಚನೆ ಆಗಿರುತ್ತವೆ. ಈ ಕುರಿತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಸರ್ವೆ ನಂ. 213/ಸಿ ನ್ನು ರುದ್ರಪ್ಪ ರವರಿಗೆ ಸ್ವಾತಂತ್ರ್ಯ ಹೋರಾಟಗಾರ ಎಂದು ಸರಕಾರದಿಂದ ಭಕ್ಷೀಸ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ರುದ್ರಪ್ಪ ರವರ ಎಲ್ಲಾ ವಾರಸುದಾರರಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಅಮೀನಗಡ ಸರ್ವೆ ನಂ. 317/1 ಮತ್ತು 317/2 ಇವುಗಳನ್ನು ಬಿನಶೇತ್ಕಿ ಮಾಡಿಸಲಿಕ್ಕೆ ಚನ್ನಪ್ಪ ಮತ್ತು ಈರಪ್ಪ ರವರ ವಾರಸುದಾರರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಈ ಜಮೀನುಗಳ ಮೇಲೆ ಇರುವ ಸಾಲದ ಭಾದ್ಯತೆಗಳು 13 ರಿಂದ 16 ನೇ ಪ್ರತಿವಾದಿಯರ ಮೇಲೆ ಬಂಧನಕಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಜಮೀನುಗಳ ಮೇಲೆ 95 ಲಕ್ಷ ರೂ.ಗಳ ಸಾಲ ಇರುತ್ತದೆ. ಈ ಕುರಿತಂತೆ ಸಾಲದ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಶಂಕ್ರವ್ವ ರವರ ವಾರಸುದಾರರಿಗೆ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.